ಓಎಸ್.35/2013
ಪಿಡಬ್ಲ್ಯೂ-1

ದಿನಾಂಕ 19-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ವಕೀಲರಿಂದಃ-

ನನ್ನ ತಾಯಿ 2018 ರಲ್ಲಿ ಮೃತರಾಗಿರುತ್ತಾರೆ. ನನ್ನ ಅಜ್ಜಿ ತಂಗಮ್ಮ 2000-2001 ರಲ್ಲಿ ಮೃತರಾಗಿರುತ್ತಾರೆ. 1 ನೇ ಪ್ರತಿವಾದಿಯ ತಾಯಿ 2000 ರಲ್ಲಿ ತೀರಿ ಹೋಗಿದ್ದಾರೆ. ನಿಪಿ-24 ರ ಆರ್.ಟಿ.ಸಿಯಲ್ಲಿರುವ ಹೆಸರುಗಳನ್ನು ನಾನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಅವರು ಈ ದಾವೆಗೆ ಸಂಬಂಧ ಇಲ್ಲ ಎನ್ನುತ್ತಾರೆ. ಅವರು ದಾವಾಸ್ತಿಗೆ ಹಕ್ಕುದಾರರು ಎಂದರೆ ಸರಿಯಲ್ಲ. ನಿಪಿ-28 ರ ಆರ್.ಟಿ.ಸಿಯಲ್ಲಿರುವ ಹೆಸರುಗಳನ್ನು ನಾನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಅವರು ಈ ದಾವೆಗೆ ಸಂಬಂಧ ಇಲ್ಲ ಎನ್ನುತ್ತಾರೆ. ಅವರು ದಾವಾಸ್ತಿಗೆ ಹಕ್ಕುದಾರರು ಎಂದರೆ ಸರಿಯಲ್ಲ. ದಾಯಾದಿಗಳಾದ ಕಾರಣ ಅವರ ಹೆಸರುಗಳು ಸದರಿ ದಾಖಲೆಗಳಲ್ಲಿವೆ. 1 ನೇ ಪ್ರತಿವಾದಿಯ ಚಿಕ್ಕಪ್ಪ 2 ರಿಂದ 4 ನೇ ಪ್ರತಿವಾದಿಯರಿಗೆ ಆಸ್ತಿಯನ್ನು ಮಾರಿದ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. 6 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಗಂಡ. ದಾವಾಸ್ತಿಗೂ 6 ನೇ ಪ್ರತಿವಾದಿಗೂ ಯಾವ ಸಂಬಂಧ ಇಲ್ಲ. ದಾವಾಸ್ತಿಗೂ 7 ನೇ ಪ್ರತಿವಾದಿಗೂ ಯಾವ ಸಂಬಂಧ ಇಲ್ಲ. ನನ್ನ ಪ್ರಮಾಣಪತ್ರದಲ್ಲಿ 27 ಸರ್ವೆ ನಂಬರುಗಳು ಇವೆ ದಾವಾಪತ್ರದಲ್ಲಿ 26 ಸರ್ವೆ ನಂಬರುಗಳು ಇವೆ ಎಂದರೆ ಸರಿಯಲ್ಲ.

ನನ್ನ ತಾಯಿ ಪಾಲು ಕೇಳಿದ್ದಕ್ಕೆ ದಾಖಲೆ ಇಲ್ಲ. ನನ್ನ ಅಜ್ಜ ತಿಮ್ಮಯ್ಯನವರು 1994 ರಲ್ಲಿ ತೀರಿ ಹೋಗಿದ್ದಾರೆ. ಅವರು ತೀರಿ ಹೋದ ನಂತರ 2012 ರವರೆಗೂ 1 ನೇ ಪ್ರತಿವಾದಿಯ ಹೆಸರಿಗೆ ಆರ್ ಟಿ ಸಿ ಇತ್ತು. ನನ್ನ ತಾಯಿ ಹೆಸರು ಆರ್ ಟಿ ಸಿಯಲ್ಲಿ ಬಂದಿರಲಿಲ್ಲ. 1977-1978 ರಲ್ಲಿ ನನ್ನ ತಾಯಿ ವಿಲ್ಲು ಮಾಡಿದ್ದರು. 1987 ರಲ್ಲಿ ಸದರಿ ವಿಲ್ಲನ್ನು ವಜಾ ಮಾಡಿಸಿದ್ದಾರೆ. ದಾವಾಸ್ತಿಗೆ ಸಂಬಂಧಪಟ್ಟಂತೆ ಯಾವುದಾದರು ದಾಖಲೆಗಳು ಇವೆಯಾ ಎಂದರೆ ಇಲ್ಲ ಎನ್ನುತ್ತಾರೆ. ನನ್ನ ತಾತ ಅಂಗಡಿಯನ್ನು ಇಟ್ಟಿದ್ದರು. ನನ್ನ ತಾತನಿಗೆ ತಕ್ಕಮಟ್ಟಿಗೆ ಆದಾಯ ಇತ್ತು. ನನ್ನ ತಾತ ವರಮಾನದಲ್ಲಿ ಅನೇಕ ಆಸ್ತಿಗಳನ್ನು ತೆಗೆದುಕೊಂಡಿದ್ದರು ಎಂದರೆ ನಿಜ. ನನ್ನ ತಾಯಿ ತಿಮ್ಮಯ್ಯನ ಮೊದಲನೆ ಹೆಂಡತಿಯ ಮಗಳು ಎಂದರೆ ನಿಜ. 1 ನೇ ಪ್ರತಿವಾದಿ ನನ್ನ ತಾತನ 2 ನೇ ಹೆಂಡತಿಯ ಮಗಳು ಎಂದರೆ ನಿಜ. ನನ್ನ ತಾಯಿಗೆ ಚೆನ್ನಾಗಿ ಮದುವೆ ಮಾಡಿದ್ದರು ಎಂದರೆ ನಿಜ. ಅವರಿಗೆ ಏನು ಕೊಡಬೇಕು ಅದನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ.

ನನ್ನ ತಾಯಿ ಯಾವಾಗ ಮದುವೆಯಾಗಿದ್ದರು ಎಂದು ಗೊತ್ತಿಲ್ಲ. ದಿನಾಂಕ 11-08-1981 ರಂದು ನನ್ನ ತಾತ ಅವರ ಆಸ್ತಿಗಳ ನೋಂದಾಯಿತ ವಿಭಾಗಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರು ವಿಲ್ಲನ್ನು ಮಾಡಿದ್ದರು. ನನ್ನ ತಾತನವರು ಎಲ್ಲಾ ಆಸ್ತಿಗಳನ್ನು ವಿಭಾಗಪತ್ರದ ಮೂಲಕ ಕೊಟ್ಟಿದ್ದಾರೆ ಎನ್ನುವುದು ಶುದ್ಧ ಸುಳ್ಳು. ನಿಪಿ-23 ರಲ್ಲಿ 10 ಸೆಂಟ್ ಇದ್ದರೂ ಸಹ ನಾನು ಸರ್ವೆ ನಂ.94/3 ರಲ್ಲಿ 4.38 ಎಕರೆ ಎಂದು ತೋರಿಸಿದ್ದೇನೆ ಎಂದರೆ ದಾವೆ ಬರೆಯುವಾಗ ತಪ್ಪಾಗಿರಬಹುದು ಎನ್ನುತ್ತಾರೆ. ನಿಪಿ-24 ರಲ್ಲಿ 11.34 ಸೆಂಟ್ ಇದ್ದರೂ ಸಹ ನಾನು ಸರ್ವೆ ನಂ.97/2 ರಲ್ಲಿ 1.50 ಎಕರೆ ಎಂದು ತೋರಿಸಿದ್ದೇನೆ ಎಂದರೆ ದಾವೆ ಬರೆಯುವಾಗ ತಪ್ಪಾಗಿರಬಹುದು ಎನ್ನುತ್ತಾರೆ. ಸರ್ವೆ ನಂ.92/2 ರಲ್ಲಿ 6 ಎಕರೆ ಎಂದು ತೋರಿಸಿದ್ದೇನೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ.98/1 ರಲ್ಲಿ ತೋರಿಸಿರುವ ಹೆಸರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ತೋರಿಸಿಲ್ಲ ಎಂದರೆ ಅವರು ಈ ಕೇಸಿಗೆ ಸಂಬಂಧ ಇಲ್ಲ ಎನ್ನುತ್ತಾರೆ. ಅವರಿಗೂ ಮತ್ತು ದಾವಾಸ್ತಿಗೂ ಸಂಬಂಧ ಇಲ್ಲ ಎಂದು ದಾವೆಯಲ್ಲಿ ಹೇಳಿಲ್ಲ. 2018 ರಲ್ಲಿ ನಾನು ಪೋಲೀಸರಿಗೆ ಪಿರ್ಯಾದನ್ನು ಕೊಟ್ಟಿದ್ದೇನೆ. ಅರಣ್ಯ ಇಲಾಖೆಗೆ ಕೊಟ್ಟಿಲ್ಲ. ಅದರ ಆಧಾರದ ಮೇಲೆ ನಾನು ಕಾನೂನು ಪ್ರಕಾರ ಕ್ರಮ ಕೈಗೊಂಡಿಲ್ಲ. ಈ ದಾವೆಗೋಸ್ಕರ ಸುಳ್ಳು ಪುಕಾರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ತಿಮ್ಮಯ್ಯ ಎಸ್.ಪಿ.ಯವರಿಗೆ ಪುಕಾರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆಸ್ತಿ ವಿಚಾರಕ್ಕೆ ಸಂಬಂಧಸಿದಂತೆ ನಮ್ಮ ತಾತ ಪೋಲೀಸರ ಹತ್ತಿರ ಹೋಗಿದ್ದರು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನಿಮ್ಮ ತಾಯಿಯದ್ದು ಎಂದರೆ ಸಾಕ್ಷಿಯು ಅದೇ ತರ ಇದೆ ಆದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಪುನಃ ಅದೇ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನಿಮ್ಮ ತಂದೆಯದ್ದು ಎಂದರೆ ಸಾಕ್ಷಿಯು ಅದೇ ತರ ಇದೆ ಆದರೆ ಗೊತ್ತಿಲ್ಲ  ಅವರು ಸಹಿ ಮಾಡಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ ನಾನು ನೋಡಿಲ್ಲ ಎಂದು ಹೇಳುತ್ತಾರೆ.

ನನ್ನ ಅಜ್ಜ ನನ್ನ ತಾಯಿಗೆ 80 ಸಾವಿರ ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ 80 ಸಾವಿರ ಸಂದಾಯವಾಗಿದೆ ಎಂದು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ವಿಳಾಸ ನಿಮ್ಮ ಅಜ್ಜನದ ಎಂದರೆ ಹೌದು ಎಂದು ಹೇಳುತ್ತಾರೆ. ಆ ವಿಳಾಸವು ವಿ.ವಿ. ತಿಮ್ಮಯ್ಯ, ರಾಧ ಎಸ್ಟೇಟ್, ಮೇನ್ ರೋಡ್, ಗೋಣಿಕೊಪ್ಪಲ್ ಆಗಿರುತ್ತದೆ. ನನ್ನ ತಾಯಿ

ಕೆ.ಆರ್.ನಗರದಲ್ಲಿ ಇದ್ದರು. ಅದು ನನ್ನ ತಂದೆಯ ಊರು. ಸಾಕ್ಷಿಗೆ ಒಂದು ಪತ್ರವನ್ನು ತೋರಿಸಲಾಗಿ ಅದು ನಿಮ್ಮ ತಾಯಿ ಅಂಚೆ ಮೂಲಕ ಕಳುಹಿಸಿದ್ದು ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. 15-11-1984 ರಲ್ಲಿ ನನ್ನ ತಾಯಿ ದಾಖಲೆಯನ್ನು ಬರೆದುಕೊಟ್ಟಿಲ್ಲ ಎನ್ನುತ್ತಾರೆ.

ಕೆಂಪಲಿಂಗೇಗೌಡ ಎನ್ನುವುದು ನನ್ನ ತಂದೆಯ ತಂದೆಯ ಹೆಸರು. ಕೆ.ಆರ್.ನಗರ ತಾಲ್ಲೂಕಿನ ಶ್ರೀರಾಂಪುರ ನನ್ನ ತಂದೆಯ ವಿಳಾಸ ಎಂದರೆ ನಿಜ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ನಿಮ್ಮ ತಂದೆಯ ಸಹಿ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಒಂದು ಪ್ರಮಾಣಪತ್ರವನ್ನು ತೋರಿಸಲಾಗಿ ಅದು ನಿಮ್ಮ ತಾಯಿ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಾಯಿ ಪವರ್ ಆಫ್ ಅಟಾರ್ನಿಯನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ದಿನಾಂಕ 29-05-1995 ರಂದು ನಿಮ್ಮ ತಾಯಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

ನನ್ನ ತಾಯಿ ಇರುವ ಸಮಯದಲ್ಲಿ ಒಂದು ಜೀಪು ಇತ್ತು ಅದರ ನಂಬರ್ ಗೊತ್ತಿಲ್ಲ ಎನ್ನುತ್ತಾರೆ. 1996 ರಲ್ಲಿ ಜೀಪನ್ನು ಮಾರಿದ್ದೇನೆ. ಸದರಿ ಜೀಪು ನನ್ನ ತಾಯಿಯ ಹೆಸರಿನಲ್ಲಿತ್ತು. ಸದರಿ ಜೀಪನ್ನು ನಾವು ಕಂಪೆನಿಯಿಂದ ಕೊಂಡಿರಲಿಲ್ಲ. ಬೇರೆ ವ್ಯಕ್ತಿಯಿಂದ ಖರೀದಿ ಮಾಡಿದೆವು. ಅವರ ಹೆಸರು ಗೊತ್ತಿಲ್ಲ. ಯಾರಿಗೆ ಮಾರಿದ್ದಾರೆ ಎಂದು ಗೊತ್ತಿಲ್ಲ. ನನ್ನ ಅಜ್ಜನವರು ಸಹಾಯಧನವೆಂದು ನನ್ನ ತಾಯಿಗೆ ಮೂರು ಲಕ್ಷ ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ 29-05-1995 ರಲ್ಲಿ ಬ್ಯಾಂಕಿನಿಂದ ಒಂದೂವರೆ ಲಕ್ಷ ಹಣ ಮತ್ತು ಇನ್ನೂ ಒಂದೂವರೆ ಲಕ್ಷ ಹಣ ನನ್ನ ತಾಯಿಯ ಹೆಸರಿಗೆ 1 ನೇ ಪ್ರತಿವಾದಿಯಿಂದ ಒಟ್ಟು ಮೂರು ಲಕ್ಷ ಹಣ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾಯಿ ಇರುವಾಗ ನಾನು ಯಾವ ವ್ಯವಹಾರಕ್ಕೂ ಖುದ್ದು ಭಾಗವಹಿಸಿಲ್ಲ. ನನ್ನ ತಾತನವರು ವಿಭಾಗ ಪತ್ರ ಮಾಡಿದ ದಿನ ವಿಲ್ ಪತ್ರವನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ದಾಖಲೆಯ ಮೂಲಕ ತಮ್ಮ ಹಕ್ಕುಗಳನ್ನು ಕೊಟ್ಟಿದ್ದು ಅವರ ಮರಣಾ ನಂತರ ಅದು ಜಾರಿಗೆ ಬಂದಿದೆ ಎಂದರೆ ಸರಿಯಲ್ಲ. ತಂಗಮ್ಮ ಜಂಟಿಯಾಗಿ ದಾವಾಸ್ತಿಗಳನ್ನು ನೋಡಿಕೊಳ್ಳುತ್ತಿದ್ದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಗೆ ವ್ಯವಹಾರದಿಂದ ಬಂದ ಲಾಭದಿಂದ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ಏನು ಬರಬೇಕು ಅದು ಬಂದಿರುವ ಕಾರಣ 1994

ರಿಂದ 2013 ರವರೆಗೆ ಯಾವುದೇ ತರಹದ ಪಾಲು ಕೇಳಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಏನನ್ನು ಕೊಟ್ಟಿಲ್ಲ. ನನ್ನ ತಾಯಿಗೆ ಭಾಗ ಕೇಳುವ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ತಿಮ್ಮಯ್ಯನವರ ಹತ್ತಿರ ಇದ್ದ ಹೊಸ ಜೀಪಿಗೆ ಎರಡು ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ಪಾಲಾಗಿದ್ದರೂ ಸಹ ಜೀಪು ಮತ್ತು ಹಣವನ್ನು ನನ್ನ ತಾಯಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಜೀಪನ್ನು ಉಪಯೋಗಕ್ಕೆ ಎಂದು ಕೇಳಿ ಅದನ್ನೂ ಸಹ ನಾವು ಮಾರಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಶಂಕರದೇವ ಮಧ್ಯ ನಿಂತು ಎಲ್ಲಾ ಹಣದ ವ್ಯವಹಾರವನ್ನು ತೀರ್ಮಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ನೋಂದಣಿಪತ್ರದ ಬಗ್ಗೆ ನನ್ನ ತಾಯಿಗೆ ಮೊದಲೇ ತಿಳುವಳಿಕೆ ಇತ್ತು ಎಂದರೆ ಸಾಕ್ಷಿಯು ವಿಭಾಗ ಪತ್ರವನ್ನು ಮಾಡಿಯೇ ಇರಲಿಲ್ಲ ಎನ್ನುತ್ತಾರೆ. ಪ್ರತಿವಾದಿಯಿಂದ ಹಣ ಪಡೆದುಕೊಳ್ಳಲು ಸುಳ್ಳು ದಾವೆಯನ್ನು ನನ್ನ ತಾಯಿ ಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅಂಗಡಿ ನಡೆಸುತ್ತಿದ್ದರು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.
ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)